ದುರಸ್ಥಿ, ಜೀರ್ಣೋದ್ಧಾರ, ಅಭಿವೃದ್ಧಿ ಯೋಜನೆಯಡಿ ಬಿಡುಗಡೆ ಮಾಡಿದ ದೇವಸ್ಥಾನಗಳ ವಿವರ ಹೆಚ್ಚಿನ ಪ್ರಮಾಣದಲ್ಲಿದ್ದು, ಸಂಬಂಧಪಟ್ಟ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಆರಾಧನಾ ಯೋಜನೆ/ಪರಿಶಿಷ್ಟಜಾತಿ ಉಪಯೋಜನೆ/ ಗಿರಿಜನ ಉಪಯೋಜನೆ ಅಡಿ ಬಿಡುಗಡೆ ಮಾಡಿದ ಅನುದಾನವನ್ನು ಆಯಾ ಯೋಜನೆಯ ಮಾರ್ಗಸೂಚಿಯಂತೆ ಬಳಸಿಕೊಳ್ಳಲು ಜಿಲ್ಲಾಧಿಕಾರಿಗಳು ಕ್ರಮವಹಿಸಿರುತ್ತಾರೆ.

ಆ) 2015–16ನೇ ಸಾಲಿನಲ್ಲಿ ಸಾಮಾನ್ಯ ಯೋಜನೆಯಡಿ ಅನುದಾನ ಕೋರಿ ಸ್ವೀಕೃತವಾಗುವ ಮನವಿಗಳನ್ನು ಆಯವ್ಯಯದಲ್ಲಿ ಒದಗಿಸಿದ ಅನುದಾನದ ಲಭ್ಯತೆಗನುಗುಣವಾಗಿ ಪರಿಶೀಲಿಸಿ ಬಿಡುಗಡೆ ಮಾಡಲಾಗುತ್ತಿದೆ.

ಆರಾಧನಾ ಪರಿಶಿಷ್ಟಜಾತಿ ಉಪಯೋಜನೆ ಹಾಗೂ ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಸಿಂಧಗಿ ವಿಧಾನಸಭಾ ಕ್ಷೇತ್ರಕ್ಕೆ ರೂ.11–60 ಲಕ್ಷಗಳನ್ನು ನಿಗದಿಪಡಿಸಲಾಗಿದೆ.

ಖೈದಿಗಳ ಬಿಡುಗಡೆ

1169(2335); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ಕರ್ನಾಟಕ ಕಾರಾಗೃಹಗಳ ಕಾಯ್ದೆ ಕೆ.ಪಿ.ಆರ್. 1974 ನಿಯಮ 67, 68 ಮತ್ತು 69 ರಡಿಯಲ್ಲಿ ವೈದ್ಯಕೀಯ ಆಧಾರದ ಮೇಲೆ ಬಿಡುಗಡೆಯಾಗಬೇಕಾದ ಕೈದಿಗಳ ಸಂಖ್ಯೆ ಎಷ್ಟು? (ಕಾರಾಗೃಹಗಳವಾರು ಹಾಗೂ ಕೈದಿಗಳ ಸಂಖ್ಯೆ, ಹೆಸರಿನೊಂದಿಗೆ ಮಾಹಿತಿ ಒದಗಿಸುವುದು);

ಆ) ಸದರಿ ಕೈದಿಗಳ ಬಿಡುಗಡೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ವಯೋವೃದ್ಧ ಖೈದಿಗಳಿಗೆ ಕಾರಾಗೃಹದಲ್ಲಿ ವಿಶೇಷ ಸೌಲಭ್ಯ ನೀಡಲಾಗುತ್ತಿದೆಯೇ?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಬಿಜಾಪುರ ಕೇಂದ್ರ ಕಾರಾಗೃಹ ಶಿಕ್ಷಾ ಬಂದಿ ಸಂಖ್ಯೆ:4216 ಜಿನ್ನೇಸಾಬ ರಾಜೇಸಾಬ ಕರಜಗಿ ಈತನನ್ನು ಕರ್ನಾಟಕ ಕಾರಾಗೃಹಗಳ 1974 ನಿಯಮ 68 ರಡಿಯಲ್ಲಿ ವೈದ್ಯಕೀಯ ಆಧಾರದ ಮೇಲೆ ಅಕಾಲಿಕ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಹಂತದಲ್ಲಿ ನಿಯಮಾನುಸಾರ ಪರಿಶೀಲಿಸಿಲಾಗುತ್ತಿದೆ.

ಪ್ರಸ್ತುತ ಯಾವುದೇ ಶಿಕ್ಷಾ ಬಂಧಿಗಳು ಕೆ.ಪಿ.ಆರ್. 1974ರ ನಿಯಮ 67, 68 ಮತ್ತು 69 ರಡಿಯಲ್ಲಿ ವೈದ್ಯಕೀಯ ಆಧಾರದ ಮೇಲೆ ಅಕಾಲಿಕ ಬಿಡುಗಡೆ ಮಾಡಲು ಅರ್ಹರಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಕಾರಾಗೃಹದಲ್ಲಿರುವ ವಯೋವೃದ್ಧ ಬಂಧಿಗಳಿಗೆ ವಿಶೇಷ ಸೌಲಭ್ಯಗಳನ್ನು ವೈದ್ಯಾಧಿಕಾರಿಗಳ ಸಲಹೆಯ ಮೇರೆಗೆ ಒದಗಿಸಲಾಗುತ್ತಿದೆ.

ಪಶು ವೈದ್ಯಕೀಯ ಅಧಿಕಾರಿ ಮತ್ತು ಸಿಬ್ಬಂದಿ

1170(1708); ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ)

ಅ) ರಾಜ್ಯದ ಪಶುಸಂಗೋಪನಾ ಮತ್ತು ಪಶುವೈದ್ಯಕೀಯ ಇಲಾಖೆಯಲ್ಲಿ ಮಂಜೂರಾಗಿರುವ, ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ಖಾಲಿ ಇರುವ ವಿವಿಧ ದರ್ಜೆಯ ಪಶುವೈದ್ಯ ಅಧಿಕಾರಿಗಳು, ಪಶುವೈದ್ಯರು, ವಿವಿಧ ವರ್ಗದ ಪಶುವೈದ್ಯಕೀಯ ಸಿಬ್ಬಂದಿವರ್ಗ ಮತ್ತು ಲಿಪಿಕ ಸಿಬ್ಬಂದಿ ವರ್ಗದವರುಗಳೆಷ್ಟು; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಆ) ರಾಜ್ಯದಲ್ಲಿ ಪ್ರಸಕ್ತ ವರ್ಷ ಎಲ್ಲೆಲ್ಲಿ ಹೊಸ ಪಶುವೈದ್ಯಕೀಯ ಕೇಂದ್ರ ಪಶುವೈದ್ಯ ಆಸ್ಪತ್ರೆಗಳನ್ನು ಪ್ರಾರಂಭಿಸಲು ನಿರ್ಧರಿಸಲಾಗಿದೆ; ಜಿಲ್ಲಾವಾರು ವಿವರ ಒದಗಿಸುವುದು;